KAMS510028472014

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತಾ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 07 ನೇ ಮಾರ್ಚ್ , 2026**

**ಸಿ.ಸಿ./1234/2014**

| | |
|---|---|
| ಪಿರ್ಯಾದುದಾರರು | ರಾಜ್ಯದ ಪರವಾಗಿ<br>ಕವಲಂದೆ ಠಾಣಾ ಪೊಲೀಸರು.<br><br>(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು) |

**ವಿರುದ್ಧ**

| | |
|---|---|
| ಆರೋಪಿತರು | 1. ಕುಳ್ಳೇಗೌಡ ಬಿನ್ ಲೇಟ್ ಕ್ರಿಯೇಗೌಡ 56 ವರ್ಷ<br>2. ಶಿವರಾಜು ಬಿನ್ ಕುಳ್ಳೇಗೌಡ 42 ವರ್ಷ,<br>ಎಲ್ಲರ ವಾಸಃ ಚಿನ್ನಂಬಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು<br>**( ಆರೋಪಿತರ ಪರ ಶ್ರೀ.ಬಿ ಎಲ್ ಎಸ್  ., ವಕೀಲರು)** |

# -:: ತೀರ್ಪು ::-

ಕವಲಂದೆ ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಆರೋಪಿತರು ಭಾರತ ದಂಡ ಸಂಹಿತೆಯ ಕಲಂ. 341,323,324 ಮತ್ತು 504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ-**

ಕವಲಂದೆ ಪೊಲೀಸ್ ಠಾಣಾ ಸರಹದ್ದು ಚಿನ್ನಂಬಳ್ಳಿ ಗ್ರಾಮದ ಪ್ರಕರಣದ ಚಾಸಾ.3 ರವರು ತಮ್ಮ ಹಿತ್ತಲ ಜಾಗವನ್ನು ರಾಮೇಗೌಡ ಎಂಬುವರಿಗೆ ಕ್ರಯ ಮಾಡಿದ್ದು, ಆ ಜಾಗವನ್ನು 1ನೇ ಆರೋಪಿಯು ತಮಗೆ ವಾಪಸ್ ಕೊಡಿಸಿಕೊಡು ಎಂದು ಕೇಳುತ್ತಿದ್ದು, ಈ ವಿಚಾರದಲ್ಲಿ ಚಾಸಾ.3 ರವರ ಮೇಲೆ ದ್ವೇಷವಿದ್ದು, ದಿನಾಂಕ 02-03-2014 ರಂದು ಮದ್ಯಾಹ್ನ 3-00 ಘಂಟೆ ಸಮಯದಲ್ಲಿ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರವರ ಮನೆ ಹತ್ತಿರಕ್ಕೆ ಬಂದು ಚಾಸಾ.3 ರವರನ್ನು ಹಿತ್ತಲ ಜಾಗ ಮಾರಿಕೊಂಡಿದ್ದೀಯಾ ಅದನ್ನು ನನಗೆ ವಾಪಸ್ ಕೊಡಿಸಿಕೊಡು ಎಂದು ಚಾಸಾ.3 ರವರ ಮೇಲೆ ಗಲಾಟೆ ಮಾಡಿ, 1ನೇ ಆರೋಪಿಯು ಚಾಸಾ. 3 ರವರನ್ನು ಹಿಡಿದುಕೊಂಡು 2ನೇ ಆರೋಪಿಯು ಕೈಯಿಂದ ಮೈಕೈಗೆ ಎಡ ಮೋಣಕೈಗೆ ಹೊಡೆದು, 2ನೇ ಆರೋಪಿಯು ಚಾಸಾ.1 ರವರಿಗೆ ಕಾಲಿಂದ ಒದ್ದು ಆರೋಪಿಗಳು ಕೈಯಿಂದ ಮೈಕೈಗೆ ಗುದ್ದಿ 2ನೇ ಆರೋಪಿಯು ಒಂದು ದೊಣ್ಣೆಯಿಂದ ಬೆನ್ನಿಗೆ ಹೊಡೆದು, ಚಾಸಾ.2 ರವರಿಗೆ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಮೈಕೈ ಎದೆಗೆ ಹೊಡೆದು 2ನೇ

ಆರೋಪಿಯು ದೊಣ್ಣೆಯಿಂದ ಬಲಮೊಣಕ್ಕೈಗೆ ಹೊಡೆದು ಒಂದು ಕಲ್ಲಿನಿಂದ ಮುಖದ ಹತ್ತಿರ ಹೊಡೆದಿರುತ್ತಾರೆ ಎಂದು ಕವಲಂದೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು ಭಾ.ದಂ.ಸಂಹಿತೆ ಕಲಂ. 341,323,324 ಮತ್ತು 504 ಸಹವಾಚಕ ಕಲಂ.34 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣ ಪತ್ರ ಸಲ್ಲಿಕೆಯಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಟೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಅಭಿಯೋಜನೆ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಕೇಳಿದ ನಂತರ ದೋಷಾರೋಪಣೆಯನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ 10 ಜನ ಸಾಕ್ಷಿದಾರರ ಪೈಕಿ ಇಬ್ಬರು ಸಾಕ್ಷಿದಾರರನ್ನು ವಿಚಾರಿಸಿಕೊಂಡು, 2 ದಾಖಲಾತಿಗಳು ಮತ್ತು 2 ಮುದ್ದೆ ಮಾಲುಗಳನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಆಪಾದಿಸುವಂತಹ ಯಾವುದೇ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ

ಆರೋಪಿತರ ಹೇಳಿಕೆಯನ್ನು ಮನ್ನಾ ಮಾಡಲಾಯಿತು.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

## ಅಂಶಗಳು

1. ಕವಲಂದೆ ಪೊಲೀಸ್ ಠಾಣಾ ಸರಹದ್ದು ಚೆನ್ನಂಬಳ್ಳಿ, ಗ್ರಾಮದ ಚಾಸಾ.3 ರವರು ತಮ್ಮ ಹಿತ್ತಲ ಜಾಗವನ್ನು ರಾಮೇಗೌಡ ಎಂಬುವರಿಗೆ ಕ್ರಯ ಮಾಡಿದ್ದು, ಜಾಗವನ್ನು 1ನೇ ಆರೋಪಿ ತಮಗೆ ಕೊಡಿಸಿಕೊಡು ಎಂದು ಕೇಳುತ್ತಿದ್ದು, ಈ ವಿಚಾರದಲ್ಲಿ ಚಾಸಾ.3 ರವರ ಮೇಲೆ ದ್ವೇಷವಿದ್ದು, ದಿನಾಂಕ 02.03.2014 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರ ಮನೆ ಹತ್ತಿರಕ್ಕೆ ಬಂದು ಚಾಸಾ.3 ರವರನ್ನು ಹಿತ್ತಲ ಜಾಗ ಮಾರಿಕೊಂಡಿದ್ದೀಯಾ ಅದನ್ನು ನನಗೆ ವಾಪಸ್ ಕೊಡಿಸಿಕೊಡು ಎಂದು ಚಾಸಾ.3 ರವರ ಮೇಲೆ ಗಲಾಟೆ ಮಾಡಿ ಆರೋಪಿತರು ಚಾಸಾ.3 ರವರನ್ನು ಹಿಡಿದು ಅಕ್ರಮ ತಡೆಯ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

2. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ, 2 ನೇ ಆರೋಪಿಯು ಚಾಸಾ.3 ರವರಿಗೆ ಕೈಯಿಂದ ಮೈಕೈಗೆ, ಎಡ ಮೊಣಕೈಗೆ ಹೊಡೆದಿರುತ್ತಾರೆ, ಚಾಸಾ.1 ರವರಿಗೆ ಕಾಲಿಂದ ಒದ್ದು, 1 ನೇ ಮತ್ತು 2 ನೇ ಆರೋಪಿತರ ಕೈಯಿಂದ ಮೈಕೈಗೆ ಗುದ್ದಿ ಚಾಸಾ. 2 ರವರಿಗೆ ಕೈಗಳಿಂದ ಮೈಕೈಗೆ, ಎದಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

3. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ 2 ನೇ ಆರೋಪಿಯು ಚಾಸಾ-1 ರವರಿಗೆ ದೊಣ್ಣೆಯಿಂದ ಬೆನ್ನಿಗೆ ಹೊಡೆದು, 2 ನೇ ಆರೋಪಿಯು ಚಾಸಾ.2 ರವರಿಗೆ ದೊಣ್ಣೆಯಿಂದ ಬಲಮೊಣಕೈಗೆ ಹೊಡೆದು ಕಲ್ಲಿನಿಂದ ಮುಖದ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

4 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿಗಳು

ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆರೋಪಿತರು ಚಾಸಾ.2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

5 ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

| | |
|---|---|
| **ಅಂಶ-1 ರಿಂದ 4** | **:ನಕಾರಾತ್ಮಕವಾಗಿ.** |
| **ಅಂಶ-5** | **: ಅಂತಿಮ ಆದೇಶದಂತೆ.** |
| | **ಈ ಕೆಳಕಂಡ ಕಾರಣಗಳಿಂದ:** |

**ಕಾರಣಗಳು**

9. **ಅಂಶ 1 ರಿಂದ 4:-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

10. ದೋಷಾರೋಪಣಾ ಪತ್ರದಲ್ಲಿ ಚಾಸಾ.1 ಮತ್ತು 2 ರವರನ್ನು ಪಿರ್ಯಾದಿ ಮತ್ತು ಗಾಯಾಳುಗಳು ಎಂದು ನಮೂದಿಸಿದ್ದು, ಅಭಿಯೋಜನೆಯ ಪರವಾಗಿ ಚಾಸಾ-1 ಮತ್ತು 2 ರವರನ್ನು ಪ್ರಾಸಾ-1 ಮತ್ತು 2 ಎಂದು ವಿಚಾರಿಸಿಕೊಳ್ಳಲಾಗಿದ್ದು, ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಸುಮಾರು 3 ವರ್ಷಗಳ ಹಿಂದೆ ತಾನು ತಮ್ಮ ಮನೆಯ ಹತ್ತಿರವಿದ್ದಾಗ, ತನ್ನ ಯಜಮಾನರಾದ ಚಾಸಾ.3 ರವರನ್ನು ಆರೋಪಿತರು ಹಿತ್ತಲು ಜಾಗದ ವಿಚಾರವಾಗಿ ಅವರನ್ನು ತಮ್ಮ ಮನೆಯ ಹತ್ತಿರ ಕರೆಯಿಸಿ ಹಿತ್ತಲು ಜಾಗವನ್ನು ತಮಗೆ ವಾಪಸ್ಸು ಬರೆಯಿಸಿಕೊಡಿ ಎಂದು ಚಾಸಾ.3 ರವರೊಂದಿಗೆ ಆರೋಪಿತರಾದ ಕುಳ್ಳೇಗೌಡ ಮತ್ತು ಪುಟ್ಟತಾಯಮ್ಮರವರು ಗಲಾಟೆ ಮಾಡತೊಡಗಿದರು. 1 ಮತ್ತು 2 ನೇ ಆರೋಪಿತರು ಕೈಯಿಂದ ಚಾಸಾ.3 ರವರ ಬಲಗೈಗೆ, ಬಲಪಕ್ಕೆಗೆ ಕೈಗಳಿಂದ ಹೊಡೆದರು. ತಾನು ಆರೋಪಿತರನ್ನು ಕೇಳಲಾಗಿ 1 ನೇ ಆರೋಪಿ ಕುಳ್ಳೇಗೌಡ ತನ್ನ ಎದೆಗೆ ಹಾಗೂ ಬಲಗೈಗೆ ಹೊಡೆದ ಮತ್ತು 2 ನೇ ಆರೋಪಿ ತನ್ನ ಬಲ ಸೊಂಟಕ್ಕೆ ಹೊಡೆದ. ಆರೋಪಿತರು ತನಗೆ ಕೈಯಿಂದ ಮೈಕೈಗೆ ಹೊಡೆದಿರುತ್ತಾರೆ. ದೊಣ್ಣೆಯಿಂದ ತನ್ನ ಬೆನ್ನಿಗೆ ಹೊಡೆದಿರುತ್ತಾರೆ. ಪುಟ್ಟತಾಯಮ್ಮ ತನಗೆ ಕೈಯಿಂದ ಬಲಕೆನ್ನೆಗೆ ಹೊಡೆದಿರುತ್ತಾಳೆ. ಅಷ್ಟರಲ್ಲಿ ಘಟನಾ ಸ್ಥಳಕ್ಕೆ ಚಾಸಾ.2 ರವರು ಬಂದು ಆರೋಪಿತರನ್ನು ಯಾಕೆ ಹೊಡೆಯುತ್ತೀರಿ ಎಂದು ಕೇಳಿದಾಗ 2 ನೇ ಆರೋಪಿ ಶಿವರಾಜು ಕಲ್ಲಿನಿಂದ ಚಾಸಾ.2 ರವರ ಬಲಗಣ್ಣಿನ ಹುಬ್ಬಿಗೆ ಹೊಡೆದಿರುತ್ತಾರೆ. ದೊಣ್ಣೆಯಿಂದ 2 ನೇ ಆರೋಪಿ ಚಾಸಾ.2 ರವರ ಕೈಗೆ ಹೊಡೆದಿರುತ್ತಾರೆ. ಅಷ್ಟರಲ್ಲಿ ತಮ್ಮ ಗ್ರಾಮದ ಬಸವೇಗೌಡ ಎನ್ನುವವರು ಬಂದು ಜಗಳ ಬಿಡಿಸಿರುತ್ತಾರೆ. ಆನಂತರ ತಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಪೊಲೀಸರು ಬಂದು ತಮ್ಮನ್ನು ವಿಚಾರಣೆ ಮಾಡಿ ತಮ್ಮ ಹೇಳಿಕೆ

ಪಡೆದುಕೊಂಡರು. ನಂತರ ಪೊಲೀಸರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ನುಡಿದಿರುತ್ತಾರೆ. ಮಾನ್ಯ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಿಚಾರಣೆ ಮಾಡಿದಾಗ ಪ್ರಾಸಾ.1 ರವರು 1 ಮತ್ತು 2 ನೇ ಆರೋಪಿತರು ಚಾಸಾ.2 ರವರಿಗೆ ನೀನು ಬಂದೀಯಾ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಚಾಸಾ.3 ರವರನ್ನು 1 ಮತ್ತು 2 ನೇ ಆರೋಪಿತರು ಹಿಡಿದು ಅಕ್ರಮ ತಡೆಯುಂಟು ಮಾಡಿದ್ದಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಪ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ತನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರಿಗೆ ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ.

11. ಪ್ರಾಸಾ-1 ರವರು ನಿಶಾನೆ ಪಿ-1 ಪ್ರಥಮ ವರ್ತಮಾನ ಹೇಳಿಕೆಯಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ.

12. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-2 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದಾಗ್ಯೂ ಕೂಡ ಅವರಿಂದ ಅಭಿಯೋಜನಾ ಪ್ರಕರಣಕ್ಕೆ ಉಪಯುಕ್ತವಾಗುವಂತಹ ಯಾವುದೇ ಮಾಹಿತಿ ಹೊರಬಂದಿರುವುದಿಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-2 ರವರಿಗೆ ತಾವು ನಿಶಾನೆ ಪಿ-2 ರಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-2 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಆ ಕಾರಣದಿಂದಾಗಿ ಪ್ರಾಸಾ- 2 ರವರು

ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿದಿಲ್ಲ ಎನ್ನಲಡ್ಡಿಯಿಲ್ಲ.

13. ಈ ಪ್ರಕರಣದಲ್ಲಿ ಪ್ರಾಸಾ.1 ರವರು ಮಾತ್ರ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, ಗಾಯಾಳು ಮತ್ತು ಪ್ರತ್ಯಕ್ಷದರ್ಶಿಯಾದ ಪ್ರಾಸಾ. 2 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿಯದ ಹಿನ್ನೆಲೆಯಲ್ಲಿ ಇತರೆ ಸಾಕ್ಷಿದಾರರನ್ನು ವಿಚಾರಿಸಿಕೊಂಡಾಗ್ಯೂ ಕೂಡಾ ಯಾವುದೇ ಉದ್ದೇಶ ಈಡೇರುವುದಿಲ್ಲ ಎನ್ನುವ ಕಾರಣಕ್ಕೆ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿದಾರರಿಗೆ ಪ್ರೊಸೆಸ್ ನೀಡಬೇಕೆನ್ನುವ ಕೋರಿಕೆಯನ್ನು ತಿರಸ್ಕರಿಸಿ ಇತರೆ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಒಟ್ಟಾರೆಯಾಗಿ ಅಭಿಯೋಜನಾ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಆಪಾದನೆ ಇಲ್ಲದಿರುವುದರಿಂದ ಅವರುಗಳ ವಿರುದ್ಧ ಹೊರಿಸಲಾದ ದೋಷಾರೋಪಣೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ ಹೆಚ್ಚಿನ ಚರ್ಚೆಗೆ ಅವಕಾಶ ನೀಡದೇ **ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

14. **ಅಂಶ-5:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾಗಿರುವಂತಹ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## -:: ಆದೇಶ ::-

ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ. 341,323,324 ಮತ್ತು 504 ಸಹವಾಚಕ ಕಲಂ.34 ರಡಿಯಲ್ಲಿನ ದೋಷಾರೋಪಣೆಗಳಿಂದ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್ ನಂ.13/2014, ದಿಃ03.03.2014 ಕ್ರಮ ಸಂಃ1 ರಲ್ಲಿ ನಮೂದಿಸಿರುವ ಒಂದು 2 ಅಡಿ ಉದ್ದದ ಕಾಡು ಜಾತಿಯ ಸಣ್ಣ ದೊಣ್ಣೆ ಮತ್ತು ಕ್ರಮ ಸಂಃ2 ರಲ್ಲಿ ನಮೂದಿಸಿರುವ ಒಂದು ಹಿಡಿ ಗಾತ್ರದ ಕಾಡು ಜಾತಿಯ ಕಲ್ಲು ನಿಷ್ಪ್ರಯೋಜಕ ಮತ್ತು ಮೌಲ್ಯರಹಿತ ವಸ್ತುವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಯವರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ **07 ನೇ ಮಾರ್ಚ್, 2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.

## -ಅನುಬಂಧ-

### 1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ

ಪ್ರಾಸಾ-1 : ಮಾಯಮ್ಮ

ಪ್ರಾಸಾ-2 : ರಾಜು

2. **ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳು:**

| | | |
|---|---|---|
| ನಿಪಿ-1 | : | ದೂರು |
| ನಿಪಿ-2 | : | ಪ್ರಾಸಾ.2 ರವರ ಮರು ಹೇಳಿಕೆ |

3. **ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳು:**

ಮು.ಮಾ.1-ಕಾಡು ಜಾತಿಯ ಕಲ್ಲು

ಮು.ಮಾ.2-ಮರದ ದೊಣ್ಣೆ

4. **ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

5. **ಆರೋಪಿತರ ಪರ ಗುರುತಿಸಲಾದ ದಾಖಲೆಗಳು:**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.